₹ 5
ಸಂಪುಟ: 3 ಸಂಚಿಕೆ: 305 ಪುಟಗಳು: 12
09.11.2018 ಶುಕ್ರವಾರ
ಬೆಂಗಳೂರು | ಹುಬ್ಬಳ್ಳಿ | ಮಂಗಳೂರು
ದಾವಣಗೆರೆ | ಕಲಬುರಗಿ | ಬೆಳಗಾವಿ
@vishwavaninews
vishwavanitimely
epaper.vishwavani.news
vishwavani.news
ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ದಾರಿದೀಪೋಕ್ತಿ

ನಿಮ್ಮ ಮಾತುಗಳನ್ನು ಭಾವನೆಗಳೊಂದಿಗೆ ಬೆರೆಸಬೇಡಿ. ಕಾರಣ ನಿಮಗೆ ನಿಮ್ಮ ಭಾವನೆಯನ್ನು ಬದಲಿಸಲು ಆಯ್ಕೆಗಳಿವೆ. ಆದರೆ ಮಾತುಗಳನ್ನು ಬದಲಿಸಲು ಆಗುವುದಿಲ್ಲ.



ಕೆಲವು ಸಾರಿ ನಮ್ಮವರು ಬೇರೆಯವರೆನಿಸುವುದು ಸಹಜ!
ಗುರುಮನ 6
ಗೌರ್ ಗೋಪಾಲ್

# ವಿಶ್ವವಾಣಿ

ವಿಶ್ವಾಸವೇ ವಿಶ್ವ




ಸಹಾಯವಾಣಿ WhatsApp
91106 38698
helpline@vishwavani.news

## ಬಾಲಕಿ ಬಾಯಲ್ಲಿ ಪಟಾಕಿ ಸಿಡಿಸಿ ವಿಕೃತಿ

**ಲಖನೌ:** ಯುವಕನೊಬ್ಬ ಮೂರು ವರ್ಷದ ಮಗುವಿನ ಬಾಯಿಯಲ್ಲಿ ಪಟಾಕಿ ಸಿಡಿಸಿ ವಿಕೃತಿ ಮೆರೆದ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ. ದೌರಲಾ ರೋಡ್ ನಲ್ಲಿರುವ ಮಲಿಕ್ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ತೀವ್ರವಾಗಿ ಗಾಯಗೊಂಡಿದ್ದ ಬಾಲಕಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆಕೆಯ ಸ್ಥಿತಿ ಗಂಭೀರವಾಗಿದೆ. ದುಷ್ಕೃತ್ಯ ಎಸಗಿರುವ ಯುವಕನಿಗಾಗಿ ಶೋಧ ನಡೆದಿದೆ. ಸಂತ್ರಸ್ತ ಬಾಲಕಿಯ ಬಾಯಿಗೆ 50 ಹೊಲಿಗೆ ಹಾಕಲಾಗಿದ್ದು, ಗಂಟಲಿಗೆ ಸೋಂಕು ತಗುಲಿದೆ ಎಂದು ವೈದ್ಯರು ಹೇಳಿದ್ದಾರೆ.

## 15ರಿಂದ ಕೃಷಿ ಮೇಳ

**ಬೆಂಗಳೂರು:** ಕೃಷಿಯಲ್ಲಿನ ನೂತನ ಸುಧಾರಣೆ ಹಾಗೂ ಹೊಸ ತಳಿಗಳನ್ನು ರೈತರಿಗೆ ಪರಿಚಯಿಸಲು ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ನ.15 ರಿಂದ 18ರವರೆಗೆ ಕೃಷಿ ಮೇಳ ಏರ್ಪಡಿಸಲಾಗಿದೆ. ರಾಜ್ಯಪಾಲ ವಜುಭಾಯಿ ವಾಲಾ ಚಾಲನೆ ನೀಡಲಿದ್ದಾರೆ.

## ಕೊಡಗಿನಲ್ಲಿ ನಿಷೇಧಾಜ್ಞೆ ಜಾರಿ

**ಮಡಿಕೇರಿ:** ಕೊಡಗಿನ ಹಲವೆಡೆ ಟಿಪ್ಪು ಜಯಂತಿ ವಿರೋಧಿ ಪ್ರತಿಭಟನೆಗೆ ಸಿದ್ಧತೆ ನಡೆಯುತ್ತಿರುವಂತೆಯೇ ದಂಡ ಪ್ರಕ್ರಿಯಾ ಸಂಹಿತೆ ಸೆಕ್ಷನ್ 144, 144(ಎ)ರಂತೆ ನ.9ರಿಂದ 11ರ ವರೆಗೆ ಕೊಡಗಿನಾದ್ಯಂತ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಪಿ.ಐ.ಶ್ರೀವಿದ್ಯಾ ಆದೇಶ ಹೊರಡಿಸಿದ್ದಾರೆ.

## ಗುಂಡಿನ ದಾಳಿಗೆ 12 ಸಾವು

**ಕ್ಯಾಲಿಫೋರ್ನಿಯಾ:** ದಕ್ಷಿಣ ಕ್ಯಾಲಿಫೋರ್ನಿಯಾದಲ್ಲಿ ಬಾರ್ ಮತ್ತು ಡ್ಯಾನ್ಸ್ ಕ್ಲಬ್‌ವೊಂದರಲ್ಲಿ ಬಂದೂಕುದಾರಿಯೊಬ್ಬ ನಡೆಸಿದ ಗುಂಡಿನ ದಾಳಿಯಿಂದ 12 ಮಂದಿ ಮೃತಪಟ್ಟಿದ್ದಾರೆ. ಬುಧವಾರ ರಾತ್ರಿ 11.20ರ ಸುಮಾರಿಗೆ ಈ ದಾಳಿ ನಡೆದಿದೆ.

**ವಕ್ರತುಂಡೋಕ್ತಿ**

ಮನೆಯಲ್ಲಿ ಹೆಂಡತಿ ಮಾಡುವ ಅಡುಗೆ ತಿಂಡಿಯ ಗುಣಮಟ್ಟ ಆಕೆಯೊಂದಿಗೆ ನಿಮ್ಮ ಸಂಬಂಧ ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ಅವಲಂಬಿಸಿರುತ್ತದೆ.

ತನಿಖೆಯೇ ನಡೆಸಿಲ್ಲ ಎಂದ ಇಡಿ | ಪರಾರಿಯಾಗಿಲ್ಲ ಎಂದ ರೆಡ್ಡಿ ಪರ ವಕೀಲ | ಹೈದರಾಬಾದ್‌ನಲ್ಲಿ ಮುಂದುವರಿದ ಶೋಧ

# ರೆಡ್ಡಿ ಹೋದದ್ದೆಲ್ಲಿಗೆ?

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು



ಆ್ಯಂಬಿಡೆಂಟ್ ಸಂಸ್ಥೆಯಿಂದ ಹಣ ಪಡೆದಿರುವ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಾಜಿ ಸಚಿವ ಜನಾರ್ದನ ರೆಡ್ಡಿಯನ್ನು ಬಂಧಿಸುವ ಸಲುವಾಗಿ ಸಿಸಿಬಿ ಪೊಲೀಸರು ರಾಜ್ಯ ಸೇರಿದಂತೆ ಹೊರ ರಾಜ್ಯಗಳಲ್ಲೂ ಶೋಧ ಕಾರ್ಯ ಮುಂದುವರಿಸಿದ್ದಾರೆ. ಈ ನಡುವೆ ಪ್ರಕರಣ ತಿರುವು ಪಡೆದುಕೊಂಡಿದ್ದು, ಆ್ಯಂಬಿಡೆಂಟ್ ಸಂಸ್ಥೆಯ ವಿರುದ್ಧ ಜಾರಿ ನಿರ್ದೇಶನಾಲಯ ತನಿಖೆಯೇ ನಡೆಸಿಲ್ಲ ಎಂದು ಅಧಿಕಾರಿಗಳು ಸ್ಪಷ್ಟನೆ ನೀಡಿರುವುದು ಕುತೂಹಲಕ್ಕೆ ಕಾರಣವಾಗಿದೆ.

ರಾಜ್ಯದಲ್ಲಿ ಭಾರಿ ಸದ್ದು ಮಾಡಿರುವ ಜನಾರ್ದನ ರೆಡ್ಡಿ ಡೀಲ್ ಪ್ರಕರಣದ ತನಿಖೆ ಮುಂದುವರಿದಿದ್ದು, ಎಸಿಪಿ ಸುಬ್ರಹ್ಮಣ್ಯ ನೇತೃತ್ವದ ತಂಡ ಹೈದರಾಬಾದ್‌ನಲ್ಲಿ, ಮಂಜುನಾಥ ಚೌಧರಿ ನೇತೃತ್ವದ ಒಂದು ತಂಡ ಬಳ್ಳಾರಿಯಲ್ಲಿ, ಎಸಿಪಿ ವೆಂಕಟೇಶ್ ಪ್ರಸನ್ನ ನೇತೃತ್ವದ ತಂಡ ಬೆಂಗಳೂರಿನಲ್ಲಿ ಶೋಧ ಮುಂದುವರಿಸಿದೆ.

→ 5

### ತನಿಖೆಯೇ ನಡೆದಿಲ್ಲ: ಇಡಿ

ಆ್ಯಂಬಿಡೆಂಟ್ ಕಂಪನಿ ವಿರುದ್ಧ ನಾವು ಯಾವುದೇ ತನಿಖೆ ನಡೆಸಿಲ್ಲ. ಹೀಗಿರುವಾಗ ಈ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದ ಹೆಸರು ಏಕೆ ಬಂತು ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಸ್ಪಷ್ಟನೆ ನೀಡಿ, ಫರೀದ್ ಯಾವುದೇ ಏಜೆನ್ಸಿಗೆ ಮಾಹಿತಿ ನೀಡದೇ ಗೌಪ್ಯವಾಗಿ ದುಬೈನಲ್ಲಿ ಒಂದು ಕಂಪನಿ ಪ್ರಾರಂಭಿಸಿದ್ದರು. ಅಲ್ಲಿ ವಿದೇಶಿ ಕರೆನ್ಸಿ ಬದಲಾವಣೆಯ ವಹಿವಾಟು ನಡೆಯುತ್ತಿತ್ತು. ಅದನ್ನು 'ಫೋರೆಕ್ಸ್ ಟ್ರೇಡಿಂಗ್' ಎಂದು ಕರೆಯಲಾಗುತ್ತದೆ. ನಾವು ಆ ಕಂಪನಿ ವಿರುದ್ಧ ತನಿಖೆ ನಡೆಸಿದ್ದೇವೆ ಹೊರತು,ಆ್ಯಂಬಿಡೆಂಟ್ ಕಂಪನಿ ವಿರುದ್ಧವಲ್ಲ ಎಂದಿದ್ದಾರೆ.

ಜನವರಿಯಲ್ಲಿ ನಗರದ ಕಚೇರಿ ಮೇಲೆ ದಾಳಿ ನಡೆಸಿದಾಗ ದುಬೈ ಕಂಪನಿಯಲ್ಲಿ 4 ಕೋಟಿ ರು. ವ್ಯವಹಾರ ನಡೆದಿರುವುದು ಗಮನಕ್ಕೆ ಬಂದಿತ್ತು. ಹೀಗಾಗಿ, ಫೆಮಾ ಆಕ್ಟ್ ನಿಯಮಗಳನ್ನು ಉಲ್ಲಂಘಿಸಿರುವ ಬಗ್ಗೆ ಫರೀದ್‌ಗೆ ನೋಟಿಸ್ ನೀಡಿದ್ದೆವು. ಈ ಬಗ್ಗೆ ಅವರು, ತಪ್ಪೊಪ್ಪಿಕೊಂಡು 2 ಕೋಟಿ ರು. ದಂಡ ಕಟ್ಟಿದ್ದರು. ಅಲ್ಲಿಗೆ ಈ ಪ್ರಕರಣ ಇತ್ಯರ್ಥವಾಗಿತ್ತು ಎಂದಿದ್ದಾರೆ.



### ನಮ್ಮ ಬಳಿ ಸಾಕ್ಷಿ ಇದೆ

ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ನಡೆದ ಡೀಲ್ ಬಗ್ಗೆ ಹೆಚ್ಚಿನ ತನಿಖೆ ನಡೆಯುತ್ತಿದ್ದು, ಅಲ್ಲಿ ಸಿಕ್ಕ ಫೋಟೊ ಬಗ್ಗೆ ಪರಿಶೀಲನೆ ನಡೆಸುತ್ತಿದ್ದೇವೆ ಎಂದು ಡೀಲ್ ಪ್ರಕರಣದ ತನಿಖೆ ನಡೆಸುತ್ತಿರುವ ಸಿಸಿಬಿ ಹೆಚ್ಚುವರಿ ಆಯುಕ್ತ ಅಲೋಕ್ ಕುಮಾರ್ ತಿಳಿಸಿದ್ದಾರೆ. ಸದ್ಯ ಆ್ಯಂಬಿಡೆಂಟ್ ಕಂಪನಿಯ ಮಾಲೀಕ ಫರೀದ್‌ನನ್ನು ವಿಚಾರಣೆಗೆ ಒಳಪಡಿಸಿದ್ದು, ಹೆಚ್ಚಿನ ಮಾಹಿತಿ ಕಲೆ ಹಾಕಲಾಗುತ್ತಿದೆ ಎಂದರು. ಜನಾರ್ದನ ರೆಡ್ಡಿ ಅವರ ಬಂಧನ ಅಥವಾ ಕಸ್ಟಡಿಗೆ ತೆಗೆದುಕೊಳ್ಳಬೇಕಾ ಎನ್ನುವುದರ ಬಗ್ಗೆ ಏನೂ ಹೇಳುವುದಿಲ್ಲ. ಸಾಕ್ಷಿ ಇರುವ ಹಿನ್ನೆಲೆ ಏನು ಬೇಕಾದರೂ ಆಗಬಹುದು ಎಂದರು.



ಬಳ್ಳಾರಿಯ ಜನಾರ್ದನ ರೆಡ್ಡಿ ನಿವಾಸದಲ್ಲಿ ಶೋಧ ಕಾರ್ಯದಲ್ಲಿ ಸಿಸಿಬಿ ಪೊಲೀಸರು.

ಬೆಂಗಳೂರಿನ ಸಚಿವನಾಗಿದ್ದಾಗ ಆ್ಯಂಬಿಡೆಂಟ್ ಸಂಸ್ಥೆಯವರು ನೂತನ ಮೊಬೈಲ್ ಬಿಡುಗಡೆಗೆ ನನ್ನನ್ನು ಆಹ್ವಾನಿಸಿದ್ದರು. ಆ ಕಾರ್ಯಕ್ರಮಕ್ಕೆ ಹೋಗಿದ್ದೆ. ನನಗೂ ಆ ಸಂಸ್ಥೆ ಮಾಲೀಕರಿಗೂ ಯಾವುದೇ ಸಂಬಂಧವಿಲ್ಲ. ಆ ಸಂಸ್ಥೆಯಲ್ಲಿ ಅವ್ಯವಹಾರ ನಡೆದಿದೆ ಎಂದು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಿ.

**- ರಾಮಲಿಂಗಾ ರೆಡ್ಡಿ** ಮಾಜಿ ಸಚಿವ

**ಪ್ರಕರಣದ ಹಿನ್ನೆಲೆ:** ಆ್ಯಂಬಿಡೆಂಟ್ ಸಂಸ್ಥೆ ಚಿಟ್‌ಫಂಡ್ ನಡೆಸುವ ಮೂಲಕ ರಾಜ್ಯದ ಸಾವಿರಾರು ಜನರಿಗೆ ಕೋಟ್ಯಂತರ ರು. ಪಂಗನಾಮ ಹಾಕಿದೆ ಎನ್ನಲಾಗಿದೆ. ಪ್ರಕರಣದ ತನಿಖೆ ನಡೆಸುತ್ತಿರುವ ಸಿಸಿಬಿ ತಂಡವು ಆ್ಯಂಬಿಡೆಂಟ್ ಸಂಸ್ಥೆಯ ಮುಖ್ಯಸ್ಥ ಫರೀದ್‌ನನ್ನು ಬಂಧಿಸಿ ವಿಚಾರಣೆ ನಡೆಸುತ್ತಿದೆ. ಆ್ಯಂಬಿಡೆಂಟ್ ಸಂಸ್ಥೆ ವಿರುದ್ಧ ನಡೆಯುತ್ತಿದ್ದ ಇಡಿ. ತನಿಖೆಯನ್ನು ನಿಲ್ಲಿಸುವಂತೆ ತನಗೆ ಸಹಾಯ ಮಾಡುವುದಾಗಿ ಹೇಳಿ ಜನಾರ್ದನ ರೆಡ್ಡಿ 20 ಕೋಟಿ ರು.ಗೆ ಡೀಲ್ ಮಾಡಿದರು ಎಂದು ಫರೀದ್ ವಿಚಾರಣೆ ವೇಳೆ ಬಾಯಿ ಬಿಟ್ಟಿದ್ದಾನೆ. ಹೀಗಾಗಿ, ಈ ಪ್ರಕರಣದಲ್ಲಿ ಜನಾರ್ದನ ರೆಡ್ಡಿ ಹೆಸರು ತಳುಕು ಹಾಕಿಕೊಂಡಿದೆ ಎನ್ನಲಾಗಿದೆ.

# ನೋಟ್ಯಂತರಕ್ಕೆ 2 ವರ್ಷ: ಬಿಜೆಪಿ ಶ್ಲಾಘನೆ, ವಿಪಕ್ಷಗಳ ರೋದನೆ

ದೇಶದ ಆರ್ಥಿಕತೆ ಹಳಿಗೆ ಮರಳಿದೆ ಎಂದ ಅರುಣ್ ಜೇಟ್ಲಿ

**ದೆಹಲಿ:** ದೇಶ ಮಾತ್ರವಲ್ಲದೇ ಜಾಗತಿಕ ಮಟ್ಟದಲ್ಲೂ ಗಮನ ಸೆಳೆದಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ನೋಟ್ಯಂತರ ನಿರ್ಧಾರಕ್ಕೆ ಗುರುವಾರ ಎರಡು ವರ್ಷ ಪೂರ್ಣಗೊಂಡಿದೆ. ಈ ಹಿನ್ನೆಲೆಯಲ್ಲಿ ಆಡಳಿತಾರೂಢ ಬಿಜೆಪಿ ನಾಯಕರು ತಮ್ಮ ಸರಕಾರದ ನಿರ್ಧಾರವನ್ನು ಹೊಗಳಿದರೆ, ವಿರೋಧ ಪಕ್ಷಗಳು ಟೀಕೆ ಮುಂದುವರಿಸಿವೆ.



ಭ್ರಷ್ಟಾಚಾರ ಹಾಗೂ ಕಪ್ಪುಹಣದ ವಿರುದ್ಧದ ಯುದ್ಧ ಎಂದು ಹೇಳುವ ಮೂಲಕ ಪ್ರಧಾನಿ ನರೇಂದ್ರ ಮೋದಿ 2016ರ ನವೆಂಬರ್ 8ರಂದು ಹಳೇಯ 500 ಮತ್ತು 1000 ಮುಖಬೆಲೆಯ ನೋಟುಗಳನ್ನು ರದ್ದು ಮಾಡಿದ್ದರು. ಈ ಅಚ್ಚರಿಯ ನಿರ್ಧಾರ ದೇಶವನ್ನೇ ತಲ್ಲಣಗೊಳಿಸಿತ್ತು. ನಂತರದ ದಿನಗಳಲ್ಲಿ ಕಾಂಗ್ರೆಸ್ ಸೇರಿದಂತೆ ಇತರೆ ವಿರೋಧ ಪಕ್ಷಗಳು ಟೀಕೆ ಮಾಡುತ್ತಲೇ ಬಂದಿದ್ದು, ಈಗಲೂ ಅದನ್ನೇ ಮುಂದುವರಿಸಿವೆ.

**ಪ್ರಜಾಪ್ರಭುತ್ವದ ಕರಾಳ ದಿನಕ್ಕೆ 2 ವರ್ಷ:** ನೋಟ್ಯಂತರ ನಿರ್ಧಾರ ಒಂದು ಹಗರಣ ಎಂದು ವಾದಿಸಿಕೊಂಡು ಬಂದಿರುವ ಕಾಂಗ್ರೆಸ್, ಈ ನಿರ್ಧಾರ ಪ್ರಕಟಿಸಿದ ದಿನವನ್ನು ಕರಾಳ ದಿನ ಎಂದು ಹೇಳುತ್ತಲೇ ಬಂದಿದೆ. 'ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ನೋಟ್ಯಂತರ ಮಾಡಿ ಇಂದಿಗೆ ಎರಡು ವರ್ಷ ತುಂಬಿದ್ದು, ಇದರೊಂದಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯ ಕರಾಳ ದಿನಕ್ಕೆ ಎರಡು ವರ್ಷ ಪೂರ್ಣಗೊಂಡಿದೆ' ಎಂದು ಪ್ರತಿಪಕ್ಷ ಕಾಂಗ್ರೆಸ್ ಟೀಕಿಸಿದೆ.

ಪ್ರಧಾನಿ ಮೋದಿಯವರು ತಮ್ಮ ಉದ್ಯಮಿ ಸ್ನೇಹಿತರನ್ನು ಹೊರತುಪಡಿಸಿ ದೇಶದ ಇತರೆ ಪ್ರಜೆಗಳು ಕೇಂದ್ರ ಸರಕಾರದ ನಿರ್ಧಾರದಿಂದ ಆದ ನಷ್ಟವನ್ನು ಭರಿಸಿದ್ದಾರೆ.

→ 4




ಸಂಗ್ರಹ ಚಿತ್ರ



ನೋಟ್ಯಂತರ ಎಂಬುದು ಕೇಂದ್ರ ಸರಕಾರದ ವ್ಯವಸ್ಥಿತ ಪಿತೂರಿ. ಮೋದಿ ಅವರು ತಮ್ಮ ಸೂಟು ಬೂಟು ಧರಿಸುವ ಉದ್ಯಮಿ ಸ್ನೇಹಿತರನ್ನು ರಕ್ಷಿಸಲು ತೆಗೆದುಕೊಂಡ ನಿರ್ಧಾರ. ನೋಟ್ ಬ್ಯಾನ್ ಎಂದು ಹೇಳುವ ಮೂಲಕ ಅವರ ಕಪ್ಪು ಹಣ ಬಿಳಿ ಮಾಡಲಾಗಿದೆ.

**- ರಾಹುಲ್ ಗಾಂಧಿ** ಕಾಂಗ್ರೆಸ್ ಅಧ್ಯಕ್ಷ



ನೋಟ್ಯಂತರದ ಮೂಲಕ ಎದುರಾದ ವಿಪತ್ತಿಗೆ ಇಂದು ಎರಡು ವರ್ಷ ಪೂರ್ಣಗೊಂಡಿದೆ. ಈ ನಿರ್ಧಾರ ಘೋಷಣೆಯಾದಾಗಲೇ ಇದು ಅತ್ಯಂತ ಕೆಟ್ಟ ನಿರ್ಧಾರ ಎಂದು ನಾನು ಹೇಳಿದ್ದೆ. ಆದರೆ, ಖ್ಯಾತ ಆರ್ಥಿಕ ತಜ್ಞರು, ಸಾಮಾನ್ಯ ಜನರು ಮತ್ತು ಎಲ್ಲ ತಜ್ಞರು ತಮ್ಮ ನಿರ್ಧಾರವನ್ನು ಸ್ವಾಗತಿಸಿದ್ದಾರೆ ಎಂದು ಕೇಂದ್ರ ಸರಕಾರ ತಮ್ಮ ವಿರುದ್ಧ ಕಿಡಿ ಕಾರಿತ್ತು.

**- ಮಮತಾ ಬ್ಯಾನರ್ಜಿ** ಪಶ್ಚಿಮ ಬಂಗಾಳ ಮುಖ್ಯಮಂತ್ರಿ



ನೋಟ್ಯಂತರ ನಿರ್ಧಾರ ಎಂಬ ತುಘಲಕ್ ದರ್ಬಾರಿಗೆ ಪ್ರಾಣಬಿಟ್ಟ ಅಮಾಯಕರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ನಾವೆಲ್ಲರೂ ಎರಡು ನಿಮಿಷ ಮೌನ ಆಚರಿಸೋಣ.

**- ಮನೀಷ್ ತಿವಾರಿ** ಕಾಂಗ್ರೆಸ್ ನಾಯಕ

## ಆರ್‌ಬಿಐ ವಶಪಡಿಸಿಕೊಳ್ಳಲು ಕೇಂದ್ರದ ಯತ್ನ

ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆಗೂ ಮುನ್ನ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅನ್ನು ವಶಪಡಿಸಿಕೊಳ್ಳಲು ಪ್ರಧಾನಿ ನರೇಂದ್ರ ಮೋದಿ ಅವರ ಸರಕಾರ ಯತ್ನಿಸುತ್ತಿದೆ ಎಂದು ಕಾಂಗ್ರೆಸ್ ನಾಯಕ ಪಿ.ಚಿದಂಬರಂ ಆರೋಪಿಸಿದ್ದಾರೆ. ನವೆಂಬರ್ 19ರಂದು ಆರ್‌ಬಿಐನ ಮಂಡಳಿ ಸಭೆ ನಡೆಸಲು ಕೇಂದ್ರ ಸರಕಾರ ಎಲ್ಲ ರೀತಿಯ ಪ್ರಯತ್ನ ಮಾಡುತ್ತಿದ್ದು, ತಮ್ಮವರನ್ನು ಪ್ರಮುಖ ಸ್ಥಾನಗಳಿಗೆ ನೇಮಕ ಮಾಡಲು ಸಕಲ ಸಿದ್ಧತೆ ಮಾಡಿಕೊಂಡಿದೆ ಎಂದು ಆರೋಪಿಸಿದ್ದಾರೆ.



## ಹುಟ್ಟುಹಬ್ಬದ ಶುಭಾಶಯ

ಬಿಜೆಪಿಯ ಭೀಷ್ಮ ಎಂದೇ ಖ್ಯಾತಿ ಪಡೆದಿರುವ ಹಿರಿಯ ನಾಯಕ ಎಲ್.ಕೆ ಆಡ್ವಾಣಿ ಅವರ 91ನೇ ಜನ್ಮದಿನದ ಹಿನ್ನೆಲೆಯಲ್ಲಿ ಗುರುವಾರ ಅವರ ನಿವಾಸಕ್ಕೆ ತೆರಳಿ ಪ್ರಧಾನಿ ನರೇಂದ್ರ ಮೋದಿ ಶುಭ ಕೋರಿದರು.

## ಅಲೋಕ್ ವರ್ಮ, ಅಸ್ಥಾನಾ ಹೇಳಿಕೆ ದಾಖಲಿಸಿದ ಸಿವಿಸಿ

**ಹೊಸದಿಲ್ಲಿ:** ತಮ್ಮ ಮೇಲಿನ ಭ್ರಷ್ಟಾಚಾರದ ಆರೋಪ ಸತ್ಯಕ್ಕೆ ದೂರವಾದುದು ಎಂದು ಸಿಬಿಐ ನಿರ್ದೇಶಕ ಅಲೋಕ್ ವರ್ಮ ಕೇಂದ್ರ ಜಾಗೃತ ಆಯೋಗ (ಸಿವಿಸಿ)ಕ್ಕೆ ತಿಳಿಸಿದ್ದಾರೆ. ಸಿವಿಸಿ ಆಯುಕ್ತ ಕೆವಿ ಚೌಧರಿ, ಮತ್ತೊಬ್ಬ ಆಯುಕ್ತ ಶರದ್ ಕುಮಾರ್ ಅವರನ್ನು ಭೇಟಿ ಮಾಡಿ ವಿವರಣೆ ನೀಡಿದರು.

ಸಿಬಿಐ ವಿಶೇಷ ನಿರ್ದೇಶಕ ರಾಕೇಶ್ ಅಸ್ಥಾನಾ ಮಾಡಿರುವ ಆರೋಪಗಳು ಸುಳ್ಳು ಎಂದು ಹೇಳಿದರು. ಬಳಿಕ ರಾಕೇಶ್ ಅಸ್ಥಾನಾ ಕೂಡ ಸಿವಿಸಿ ಕಚೇರಿಗೆ ತೆರಳಿ ವಿಚಾರಣೆ ಎದುರಿಸಿದರು. ಇಬ್ಬರ ಹೇಳಿಕೆಗಳನ್ನೂ ಸಿಬಿಐ ಅಧಿಕಾರಿಗಳು ದಾಖಲಿಸಿಕೊಂಡರು. ವಿಚಾರಣೆ ನಡೆಸಿ 2 ವಾರದೊಳಗಾಗಿ ವರದಿ ನೀಡುವಂತೆ ಸುಪ್ರೀಂ ಕೋರ್ಟ್ ಅ.26ರಂದು ಸೂಚಿಸಿತ್ತು. ಭ್ರಷ್ಟಾಚಾರದ ಆರೋಪದ ಮೇರೆಗೆ ವರ್ಮಾ ಹಾಗೂ ಅಸ್ಥಾನಾ ಅವರಿಗೆ ಕೇಂದ್ರ ಸರಕಾರ ಕಡ್ಡಾಯ ರಜೆ ನೀಡಿತ್ತು.

## ಫರೀದ್‌ಗೆ ಖಡಕ್ ಎಚ್ಚರಿಕೆ

**ಬೆಂಗಳೂರು:** ಆ್ಯಂಬಿಡೆಂಟ್ ಕಂಪನಿಯ ಮಾಲೀಕ ಫರೀದ್‌ನ ವಿಚಾರಣೆ ನಡೆಸುತ್ತಿರುವ ಸಿಸಿಬಿ ಹೆಚ್ಚುವರಿ ಆಯುಕ್ತ ಅಲೋಕ್ ಕುಮಾರ್ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಕೋಟ್ಯಂತರ ಹಣ ಪಡೆದು ಸಾವಿರಾರು ಜನರಿಗೆ ವಂಚನೆ ಮಾಡಿರುವ ಫರೀದ್‌ನ ವಿಚಾರಣೆ ನಡೆಸಿ ಫುಲ್‌ಕ್ಲಾಸ್ ತೆಗೆದುಕೊಂಡಿದ್ದರು. ಆ್ಯಂಬಿಡೆಂಟ್ ಕಂಪನಿ ಆರಂಭಿಸಿದ ದಿನದಿಂದ ಇಲ್ಲಿಯವರೆಗೆ ಎಷ್ಟು ಹಣ ವರ್ಗಾವಣೆ ಮಾಡಿದ್ದಿಯೋ? ಎಲ್ಲಾ ಮಾಹಿತಿ ಕೊಡಬೇಕು. ಜನರು ಕಟ್ಟಿರುವ ಒಂದೊಂದು ರುಪಾಯಿಗೂ ಲೆಕ್ಕ ನೀಡಬೇಕು ಎಂದು ಖಡಕ್ ಆಗಿ ಕ್ಲಾಸ್ ತೆಗೆದುಕೊಂಡಿದ್ದಾರೆ ಎನ್ನಲಾಗುತ್ತಿದೆ. ಶೇ.40 ರಿಂದ 50 ಪರ್ಸೆಂಟ್ ಬಡ್ಡಿ ಕೊಡಲು ನಿನಗೆ ಹಣ ಎಲ್ಲಿಂದ ಬರುತ್ತೆ. ಕದ್ದು ಮುಚ್ಚಿ ನಡೆಸಿರುವ ಎಲ್ಲಾ ಮಾಹಿತಿಯ ದಾಖಲೆ ನೀಡಬೇಕು. ಜನರ ಹಣ ಜನರಿಗೆ ತಲುಪಬೇಕು ಎಂದು ಎಚ್ಚರಿಕೆ ಕೊಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಮಾಜಿ ಪ್ರಧಾನಿ ದೇವೇಗೌಡರನ್ನು ಭೇಟಿ ಮಾಡಿ ಮನವಿ ಮಾಡಿದ ಚಂದ್ರಬಾಬು ನಾಯ್ಡು

# ತೃತೀಯ ರಂಗದ ನೇತೃತ್ವ ಗೌಡರು ವಹಿಸಲಿ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಮುಂದಿನ ಲೋಕಸಭೆ ಚುನಾವಣೆಯಲ್ಲಿ ಪ್ರಧಾನಿ ಮೋದಿ ನೇತೃತ್ವದ ಬಿಜೆಪಿಯನ್ನು ಸೋಲಿಸಲು ತೃತೀಯ ರಂಗ ನೇತೃತ್ವ ವಹಿಸಿಕೊಳ್ಳಲು ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರನ್ನು ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮನವಿ ಮಾಡಿಕೊಂಡಿದ್ದಾರೆ.

ಪದ್ಮನಾಭ ನಗರದಲ್ಲಿರುವ ದೇವೇಗೌಡ ನಿವಾಸದಲ್ಲಿ ಗುರುವಾರ ಚಂದ್ರಬಾಬು ನಾಯ್ಡು ದೇವೇಗೌಡರನ್ನು ಭೇಟಿ ಮಾಡಿ ತೃತೀಯ ರಂಗ ರಚನೆ ಕುರಿತು ಸುದೀರ್ಘ ಮಾತುಕತೆ ನಡೆಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಚಂದ್ರ ಬಾಬು ನಾಯ್ಡು, ತೃತೀಯ ರಂಗ ರಚನೆ ಕುರಿತು ದೇವೇಗೌಡರ ಬಳಿ ಚರ್ಚಿಸಲಾಗಿದೆ. ಅದರ ನೇತೃತ್ವ ವಹಿಸಿಕೊಳ್ಳಲು ಅವರಲ್ಲಿ ಮನವಿ ಮಾಡಿಕೊಂಡಿದ್ದೇನೆ ಎಂದರು.

ಮಹಾಮೈತ್ರಿ ರಚನೆ ವಿಫಲವಾಗುತ್ತದೆ ಎಂದು ಬಿಜೆಪಿ ಕನಸು ಕಾಣುತ್ತಿದೆ. ಕರ್ನಾಟಕದ ಉಪಚುನಾವಣೆಯು ಎಲ್ಲಕ್ಕೂ ಉತ್ತರ ಕೊಟ್ಟಿದೆ. ಈ ಫಲಿತಾಂಶ ಮುಂದಿನ ಲೋಕಸಭಾ ಚುನಾವಣೆಗೆ ದಿಕ್ಸೂಚಿಯಾಗಲಿದೆ ಎಂದು ತಿಳಿಸಿದರು.

ಮಹಾಮೈತ್ರಿಯ ಪ್ರಧಾನಿ ಅಭ್ಯರ್ಥಿ ಯಾರು ಎಂದು ಪತ್ರಕರ್ತರೊಬ್ಬರು ಕೇಳಿದ ಪ್ರಶ್ನೆಗೆ, ಆ ವಿಚಾರದ ಬಗ್ಗೆ ತಾವು ಚರ್ಚಿಸಿಲ್ಲ. ಆದರೆ, ದೇಶವನ್ನು ಉಳಿಸುವತ್ತ ಮೊದಲು ಗಮನ ಹರಿಸುತ್ತಿದ್ದೇವೆ. ದೇಶಾದ್ಯಂತ ಬಿಜೆಪಿಯೇತರ ಹಾಗೂ ಜಾತ್ಯತೀತ ಮನೋಭಾವದ ಪಕ್ಷಗಳನ್ನು ಒಂದಾಗಿಸುವ ಬಗ್ಗೆ ಚರ್ಚಿಸಲಾಯಿತು ಎಂದರು.

→ 5



ಬೆಂಗಳೂರಿನ ಪದ್ಮನಾಭನಗರದಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ನಿವಾಸಕ್ಕೆ ಭೇಟಿ ನೀಡಿದ ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರನ್ನು ಸಿಎಂ ಕುಮಾರಸ್ವಾಮಿ, ಎಚ್.ಡಿ ದೇವೇಗೌಡ ಸ್ವಾಗತಿಸಿದರು.

### ಜನವರಿಯಲ್ಲಿ ಸಮಾವೇಶ

ಬಿಜೆಪಿಯೇತರ ಹಾಗೂ ಜಾತ್ಯತೀತ ಮನೋಭಾವದ ಪಕ್ಷಗಳನ್ನು ಒಗ್ಗೂಡಿಲು ಚಿಂತಿಸಲಾಗಿದೆ. ಜನವರಿಯಲ್ಲಿ ಮಮತಾ ಬ್ಯಾನರ್ಜಿ ಅವರು ಕೋಲ್ಕತಾದಲ್ಲಿ ದೊಡ್ಡ ಸಮಾವೇಶ ಇಟ್ಟುಕೊಂಡಿದ್ದಾರೆ. ಈ ಸಮಾವೇಶ ಜಾತ್ಯತೀತ ಪಕ್ಷ ನಾಯಕರನ್ನು ಒಗ್ಗೂಡಲು ವೇದಿಕೆಯಾಗಲಿದೆ.

